INDUSTRY AT HOSANAGAR

32. Sri S. M. SHEERANALY CHANDRASEKHAR (Hosanagar) .—

Will the Minister for Industries be pleased to state.—

Whether there is any proposal to establish Government sponsored industry at Hosanagar ?

Sri D. DEVARAJA URS (Chief Minister) [On behalf of Sri S. M. Krishna (Minister for Industries)].—

No.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—(ಹೊಸನಗರ) ಇದರಲ್ಲಿ ಕೈಗಾರಿಕಾ ಇಲಾಖಾವತಿಯಿಂದ ಅಧಿಕಾರಿಗಳು ಹೊಸನಗರಕ್ಕೆ ಬಂದು ಕೆಲವು ಕ್ಲೇ ತೆಗೆದುಕೊಂಡು ಅವು ಗಳನ್ನು ಪರಿಶೀಲನೆ ಮಾಡುತ್ತೇವೆಂದು ಹೇಳಿಬಿಟ್ಟು ಬಂದರು. ನಂತರ ಯಾವ ಕಾರ್ಯ ಕ್ರಮವನ್ನು ತೆಗೆದುಕೊಂಡಿಲ್ಲ. ಅದಕ್ಕೋಸ್ಕರ ಈ ಪ್ರಶ್ನೆ ಕೇಳುತ್ತಾ ಇರುವುದು. ಪ್ರಶ್ನೆಯಲ್ಲಿ ಕೇಳಿರುವುದಕ್ಕೆ ''ನೋ'' ಎಂದು ಉತ್ತರ ಕೊಟ್ಟಿದೆ ಇದಕ್ಕೆ ಕಾರಣವೇನು?

† ಶ್ರೀ ಡಿ. ದೇವರಾಜ್ ಅರಸ್.—ಕೈಗಾರಿಕೆ ಸ್ಥಾಪನೆ ಮಾಡುವುದಕ್ಕೆ ಸಾಧ್ಯವಿಲ್ಲ; ಅಂತಹ ಯಾವುದೂ ಪ್ರಪೋಸಲ್ ಇಲ್ಲ, ಎಂದು ಅದರ ಅರ್ಥ. ಒಂದುಪೇಳೆ ಅಲ್ಲಿಗೆ ಅಧಿಕಾರಿಗಳು ಬಂದು ಕ್ಲೇ ವಗೈರೆ ತಂದಿದ್ದರೆ ಅವುಗಳನ್ನು ಪರಿಶೀಲನೆಮಾಡಿ ಸಂಬಂಧಪಟ್ಟ ಇಂಡಸ್ಟ್ರೀಸ್ ಸ್ಥಾಪನೆ ಮಾಡುವುದಕ್ಕೆ ಸಾಧ್ಯತೆ ಇದೆಯೇ ಎಂಬುದನ್ನು ವಿಚಾರಮಾಡಿ ನೋಡಿ ಆದಮೇಲೆ ಏನಾದರೂ ತೀರ್ಮಾನ ತೆಗೆದುಕೊಳ್ಳಬೇಕು.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ಹೊಸನಗರಕ್ಕೆ ಮೂರು ಕಡೆಯಿಂದ ನೀರು ಆವರಿಸಿಬಿಟ್ಟು ಜನರು ಜೀವನ ಮಾಡುವುದಕ್ಕೆ ಬಹಳ ಕಷ್ಟವಾಗಿದೆ. ಟೌನು ಮಾತ್ರ ಉಳಿದು ಕೊಂಡಿದೆ. ಅಲ್ಲಿಯ ಜನರ ಜೀವನಕ್ಕೆ ಏನಾದರೂ ಕೈಗಾರಿಕೆ ಸ್ಥಾಪನೆಮಾಡಬೇಕು ಎಂದು ಪದೇಪದೇ ಸರ್ಕಾರಕ್ಕೆ ಅರಿಕೆಗಳು ಬರುತ್ತಾ ಇವೆ, ಅದರ ಬಗ್ಗೆ ಯೋಚನೆ ಮಾಡುತ್ತೀರಾ ?

ಶ್ರೀ ಡಿ. ದೇವರಾಜ್ ಅರಸ್.—ಏನಾದರೂ ಕೈಗಾರಿಕೆ ಸ್ಥಾಪನೆ ಮಾಡುವುದಕ್ಕೆ ಆಗುವುದಿಲ್ಲ. ಅಲ್ಲಿ ಕಚ್ಚಾಮಾಲು ಇರಬೇಕು ; ಕಚ್ಚಾಮಾಲು ಇದ್ದಕಡೆ ಕೈಗಾರಿಕಾ ಸ್ಥಾಪನೆ ಮಾಡುವುದಕ್ಕೆ ಅನುಕೂಲತೆ ಇರಬೇಕು. ಅನುಕೂಲಗಳಲ್ಲಿ ಕಚ್ಚಾಮಾಲು ಒಂದು. ಎರಡನೆ ಯದಾಗಿ ಹೊರಗಡೆಯವರು ಕೈಗಾರಿಕೆಯನ್ನು ಅಲ್ಲಿ ಹೋಗಿ ಹಾಕುವುದಕ್ಕೆ ಸಾಧ್ಯತೆ ಇದೆಯೇ ಎಂದು ಯೋಚನೆ ಮಾಡಬೇಕು. ಹೊರಗಡೆಯಿಂದ ಹೋಗುವವರಿಗೆ ಅಲ್ಲಿ ತಯಾರಾದ ಮಾಲು ಕಳುಹಿಸುವುದಕ್ಕೆ ಬೇರೆ ರೀತಿ ಸಂಚಾರ ಸೌಕರ್ಯ, ಹತ್ತಿರ ಮಾರ್ಕೆಟು ಸೌಕರ್ಯ ಇರತಕ್ಕದ್ದು ನೋಡಬೇಕಾಗುತ್ತದೆ. ಆದುದರಿಂದ ಹೊಸನಗರದಲ್ಲಿ ನಿಜವಾಗಿಯೂ ಬೇರೆ ಕಡೆ ಇಲ್ಲದೆ ಇರತಕ್ಕ ಯಾವುದಾರೂ ಉತ್ತಮ ತರಹ ಕಚ್ಚಾಮಾಲು, ಕೈಗಾರಿಕೆ ಸ್ಥಾಪನೆ ಮಾಡುವುದಕ್ಕೆ ಯೋಗ್ಯವಾದಂಥ ಅನುಕೂಲತೆಗಳು ಏನಾದರೂ ಇವೆಯೇ ಎಂದು ಅದನ್ನು ಪರಿಶೀಲನೆ ಮಾಡಿನುತ್ತಾ ಇದ್ದೇವೆ.

ಶ್ರೀ ಕಾಗೋಡು ತಿಮ್ಮಪ್ಪ.—ಹೊಸನಗರ ತಾಲ್ಲೂಕಿನಲ್ಲಿ ಯೋಗ್ಯ ಕೈಗಾರಿಕೆ ಸ್ಥಾಪನೆ ಮಾಡುವುದು ಸಾಧ್ಯ ಎಂದು ಪರಿಶೀಲನೆ ಮಾಡಲಾಗಿದೆಯೇ ?

ಶ್ರೀ ಡಿ. ದೇವರಾಜ್ ಅರಸ್.—ಈಗ ಅದು ಪರಿಶೀಲನೆಯಲ್ಲಿ ಇದೆ.

ಶ್ರೀ ಎನ್. ಬಸವಯ್ಯ.—ತಾವು ಹೇಳಿದ ರೀತಿಯಲ್ಲಿ ಕಚ್ಚಾಮಾಲುಗಳು ದೊರೆತರೆ ಬೇರೆ ಕಡೆ ಕೈಗಾರಿಕೆ ಸ್ಥಾಪನೆ ಮಾಡುವುದಕ್ಕೆ ಸಾಧ್ಯವೇ ?

ಶ್ರೀ ಡಿ. ದೇವರಾಜ್ ಅರಸ್.—ಬೇರೆ ಜಿಲ್ಲೆಗಳ ವಿಚಾರ ಇಲ್ಲ. ಇದು ಹೊಸನಗರದ ವಿಚಾರ.

† Indicates that the remarks or speeches have not been revised by the member concerned.